ಪ್ರಜಾವಾಣಿ

# ಪ್ರಾಣಿ ಹಿಂಸೆ ವಿರುದ್ಧ 'ಜಾಗೃತಿ ಜಾಥಾ'

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಪ್ರಾಣಿಗಳ ಮೇಲೆ ನಡೆಯುತ್ತಿರುವ ಹಿಂಸೆಯನ್ನು ತಡೆಯುವಂತೆ ಒತ್ತಾಯಿಸಿ ಪ್ರಾಣಿ ದಯಾ ಸಂಘಗಳ ಸದಸ್ಯರು ನಗರದಲ್ಲಿ ಭಾನುವಾರ 'ಜಾಗೃತಿ ನಡಿಗೆ' ಜಾಥಾ ನಡೆಸಿದರು.

ಪ್ರಾಣಿ ಹಿಂಸೆ ತಡೆಯುವ ಬಗ್ಗೆ ಮತ್ತು ಪ್ರಾಣಿಗಳ ರಕ್ಷಣೆಗಿರುವ ಕಾನೂನುಗಳ ಸಂಬಂಧ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಾಣಿ ದಯಾ ಸಂಘಗಳು ಜ.16ರಿಂದ 31ರ ವರೆಗೆ ಈ ಜಾಥಾ ಹಮ್ಮಿಕೊಂಡಿವೆ.

ಜಾಗೃತಿ ನಡಿಗೆಯು ಮೆಯೊಹಾಲ್‌ನಿಂದ ಕಬ್ಬನ್ ಉದ್ಯಾನದವರೆಗೆ ನಡೆಯಿತು. ಮುದ್ದಿನ ಸಾಕು ನಾಯಿಗಳನ್ನು ತಬ್ಬಿಕೊಂಡು ಬಂದ ಜನರು ವಿವಿಧ ಬ್ಯಾನರ್‌ಗಳನ್ನು ಹಿಡಿದು ಘೋಷಣೆ ಕೂಗುತ್ತಾ ಜಾಥಾದಲ್ಲಿ ಪಾಲ್ಗೊಂಡರು.

ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಜೈನ್ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥ ಆರ್.ಚನ್ನರಾಜ್ ಜೈನ್, 'ಪ್ರಾಣಿಗಳ ಮೇಲೆ ಅತಿ ಕ್ರೂರವಾಗಿ ವರ್ತಿಸಿ ಹಿಂಸೆ ನೀಡುವ ಜನರಲ್ಲಿ ಜಾಗೃತಿ ಮೂಡಿಸಬೇಕು. ಪ್ರಾಣಿಗಳ ರಕ್ಷಣೆಗಾಗಿ ಸಾಕಷ್ಟು ಕಾನೂನುಗಳಿವೆ. ಅವುಗಳ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು. ಆಗ, ಅವರು ತಮ್ಮ ವರ್ತನೆ ತಿದ್ದಿಕೊಳ್ಳಲು ಸಾಧ್ಯ' ಎಂದರು. ಪ್ರಾಣಿಗಳಿಗೆ ಕರುಣೆ ತೋರಬೇಕು. ಈ ಭೂಮಿ ನಮ್ಮದು ಮಾತ್ರವಲ್ಲ. ಭೂಮಿಯಲ್ಲಿನ ಪ್ರತಿ ಪ್ರಾಣಿಗೂ ಬದುಕುವ ಹಕ್ಕಿದೆ. ಅದನ್ನು ಜನರು ಮನಗಾಣಬೇಕು ಎಂದು ಜಾಥಾದಲ್ಲಿ ಭಾಗವಹಿಸಿದ್ದ ಶಿಕ್ಷಕಿ ವಿಜಯಾ ಹೇಳಿದರು.




ಪ್ರಾಣಿ ಹಿಂಸೆ ಮಾಡದಂತೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಿವಿಧ ಪ್ರಾಣಿ ದಯಾ ಸಂಘಗಳ ಸದಸ್ಯರು ನಗರದಲ್ಲಿ ಭಾನುವಾರ 'ಜಾಗೃತಿ ನಡಿಗೆ' ಜಾಥಾ ನಡೆಸಿದರು -ಪ್ರಜಾವಾಣಿ ಚಿತ್ರ